**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ</u>**

**ಸಿ.ಸಿ.ನಂ.3578/2025**

ಸಿ.ಡಬ್ಲ್ಯು 01

ಪಿ.ಡಬ್ಲ್ಯು 01

ಸಾಕ್ಷಿದಾರರ ಹೆಸರು - **ವೆಂಕಟೇಶ ಬಾಬು ಡಿ. ಎಮ್**

ತಂದೆಯ ಹೆಸರು - ಎಸ್ ಮುನಿಸ್ವಾಮಿ

ವಯಸ್ಸು - 49 ವರ್ಷ

ಉದ್ಯೋಗ - **ಕಾರ್ಮಿಕ ನಿರೀಕ್ಷಕರು, ಕುಮಟಾ ವೃತ್ತ**

ವಾಸ್ತವ್ಯ - ಅಂಕೋಲಾ

(ಇಂದು ದಿನಾಂಕಃ **07-02-2026** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**<u>ಮುಖ್ಯ ವಿಚಾರಣೆ – ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ನಾನು ಕುಮಟಾ ಕಾಶಮಿಕ ನಿರೀಕ್ಷಕರಾಗಿ ಕಳೇದ ಒಂದು ವರ್ಷದಿಂದ ಕಾರ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 06/06/2025 ರಂದು ಕಾರ್ಮಿಕ ಅಧಿಕಾರಿಗಳು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಲಲಿತಾ ಸಾತೇನ ಹಳ್ಳಿ ಇವರು ಕಛೇರಿ ಆದೇಶ ಹೊರಡಿಸಿ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕೆಣಾ ಆಯೋಗ ನವ ದೆಹಲಿ ಇವರ ನಿರ್ದೇಷನದಂತೆ ಉತ್ತರ ಕನ್ನಡ ಜಿಲ್ಲೆಯಾದಂತ ಶಾಲೆಯಿಂದ ಹೊರ ಬಂದ ಮಕ್ಕಳ ಗುರುತಿಸುವಿಕೆ ದುಡಿಮೆಗೆ ತೊಡಗಿಸಿಕೊಂಡರೆ

ರಕ್ಷಣಾ ಕಾರ್ಯಾಚರಣೆ ಹಾಗೂ ಪುನರವಸತಿ ಕಲ್ಪಿಸಬೇಕೆಂಬ ಅಭಿಯಾನವನ್ನು ನಡೆಸಲು ಆದೇಶ ಹೊರಡಿಸಿರುತ್ತಾರೆ. ಹಾಗೆಯೇ ಮತ್ತೊಮ್ಮೆ ದಿನಾಂಕಃ 24/06/2025 ರಲ್ಲಿ ತಮ್ಮ ಕಛೇರಿಗೆ ಇ ಮೇಲ್ ಬಂದಿದ್ದು, ಅದರಲ್ಲಿ ಗೋಕಣದಲ್ಲಿ ಬಾಲ ಕಾರ್ಮಿಕ ಮಕ್ಕಳನ್ನು ದುಡಿಸಿಕೊಳ್ಳುತ್ತಿರುವ ಬಗ್ಗೆ ತಿಳಿಸುತ್ತಾ ರಕ್ಷಣಾ ಕಾರ್ಯಾಚರಣೆ ನಡೆಸಲು ಆದೇಶ ನೀಡಿರುತ್ತಾರೆ. ಅದರಂತೆ ಬಾಲ ಕಾರ್ಮಿಕ ಕಾಯ್ದೆ ಯ ಕಲಂ 17 ರಲ್ಲಿ ನೇಮಕಗೊಂಡ ನಿರೀಕ್ಷಕರ ತಂಡದೊಂದಿಗೆ ರಕ್ಷಣಾ ಕಾರ್ಯಾಚರಣೆ ನಡೆಸುವ ಸಲುವಾಗಿ ಗೋಕರ್ಣ ಬಸ್ ನಿಲ್ದಾಣಕ್ಕೆ ದಿನಾಂಕಃ 26/06/2025 ರಂದು ತೆರಳಲಾಯಿತು.

ಅದೇ ದಿನ ಬೆಳಿಗ್ಗೆ 11-00 ಗಂಟೆ ಸಮಯದಲ್ಲಿ ಬಸ್ ನಿಲ್ದಾಣದ ಪಕ್ಕದಲ್ಲಿ ಬಹುಮಹಡಿ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, ತಂಡದೊಂದಿಗೆ ಅಲ್ಲಿ ಭೇಟ್ಟಿ ಕೊಟ್ಟು ಪರಿಶೀಲನೆ ನಡೆಸಲಾಯಿತು. ಆ ಸಮಯದಲ್ಲಿ ಚಾಸಾ 9 ಸುಮಾರು 11 ವರ್ಷ ಹಾಗೂ ಗೋಲು 13 ವರ್ಷ ಹಾಗೂ ಚಾಸಾ 11, 15 ವರ್ಷ ಮಕ್ಕಳನ್ನು ಹಾಕಿಕೊಂಡು Plastering helper ಕೆಲಸಕ್ಕೆ ಹಾಕಿಕೊಂಡು ಅವರ ಬಳಿ ಕೆಲಸವನ್ನು ಮಾಡಿಸುತ್ತಿರುವುದನ್ನು ಗಮನನಿಸಿ ಅವರನ್ನು ರಕ್ಷಣೆ ಮಾಡಿರುತ್ತೇವೆ. ಚಾಸಾ 9 ಹಾಗೂ 10 ರವರು ಬಾಲಕಾರ್ಮಿಕರಾಗಿದ್ದು, ಚಾಸಾ 11 ರವರು ಕಿಶೋರ ಕಾರ್ಮಿಕರಾಗಿರುತ್ತಾರೆ.

ಸದ್ರಿ ಮಕ್ಕಳನ್ನು ಕರೆದು ವಿಚಾರಿಸಿದಾಗ ನಮ್ಮನ್ನು ಈ ಕೆಲಸಕ್ಕೆ ಕರೆದುಕೊಂಡ ಬಂದ ವ್ಯಕ್ತಿ ಯಾರು ಎಂದು ಕೇಳಿದಾಗ ಇಂತಿಕಾಬ್ ಎಂದು ಹೇಳಿರುತ್ತಾರೆ. ಸದ್ರಿ ಗುತ್ತಿಗೆದಾರರನ್ನು ಈ ಕೆಲಸದ ಕುರಿತು ವಿಚಾರಿಸಿದಾಗ ಮಕ್ಕಳು ದುಡಿಯುತ್ತಿದ್ದ ಜಾಗ Divisional Controller, N.W.K.S.R.T.C., Sirsi Division ಇವರಿಂದ ಲೀಸ್‌ಗೆ ಪಡೆದ Mahalaxmi Construction ನ ಪ್ರೊಪ್ರೆಟರ ಆದ ವಿಕ್ರಾಂತ ನಾಡ ಗೌಡಾ ಎಂದು ತಿಳಿಸಿರುತ್ತಾರೆ.

**C.W.** 01 **P.W.** 01

ನಂತರ ಆರೋಪಿತನು ಸ್ಥಳಕ್ಕೆ ಬಂದಿರುತ್ತಾರೆ. Plastering helper ಕೆಲಸಕ್ಕೆ ಬಂದ ಮಕ್ಕಳ ಬಗ್ಗೆ ಚಾಸಾ 9 ರಿಂದ 11 ರವರಿಗೆ ವಿಷಯ ತಿಳಿಸಿ ಮಕ್ಕಳ ದುಡಿಮೆ ಬಗ್ಗೆ ಹಾಗೂ ಬಾಲ ಕಾರ್ಮಿಕರ ದುಡಿಮೆಯ ದುಷ್ಪರಿಣಾಮದ ಕುರಿತು ಮಾಹಿತಿಯನ್ನು ನೀಡಿ ನಿರೀಕ್ಷಾ ಟಿಪ್ಪಣಿಯನ್ನು ಜ್ಯಾರಿ ಮಾಡಿ ಮಕ್ಕಳ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ಆರೋಪಿತನಿಂದ ಚಾಸಾ 9 ರಿಂದ 11 ರವರ ಆಧಾರ ಕಾರ್ಡನ ಪ್ರತಿಗಳನ್ನು ಪಡೆದುಕೊಳ್ಳಲಾಯಿತು. ನಂತರ ಆರೋಪಿತನ ವಾಹನದಲ್ಲಿ ಮಕ್ಕಳನ್ನು ಶಿರ್ಶಿಯ ಬಾಲ ಮಂದಿರಕ್ಕೆ ಆರೈಕೆ ಹಾಗೂ ಪುನರ್ವಸತಿ ಕಲ್ಪಿಸುವ ಸಲುವಾಗಿ ಅವರ ವಶಕ್ಕೆ ನೀಡಲಾಯಿತು.

ನಂತರ ಮಾರನೇ ದಿನ ಘಟನೆಗೆ ಸಂಬಂಧಿಸಿದಂತೆ ಗೋಕರ್ಣ ಪೊಲೀಸ ಠಾಣೆಗೆ ತೆರಳಿ ಬಾಲ ಕಾರ್ಮಿಕರನ್ನು ದುಡಿಸಿಕೊಂಡ ಬಗ್ಗೆ ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲಾತಿಯು **ದೂರಾಗಿದ್ದು**, ಅದನ್ನು **ನಿ.ಪಿ.1 ಎಂದು,** ಸಾಕ್ಷಿಯ ಸಹಿಯನ್ನು **ನಿ.ಪಿ.1ಎ ಎಂದು** ಗುರುತಿಸಲಾಯಿತು.

**ಈ ಹಂತದಲ್ಲಿ ಆರೋಪಿ ಹಾಗೂ ಆರೋಪಿತರ ವಕೀಲರು ನ್ಯಾಯಾಲಯದ ಮುಂದೆ ಗೈರು ಹಾಜರ ಇದ್ದು, ಯಾವುದೇ ಸಕಾರಣಗಳು ಕಂಡು ಬರದ ಕಾರಣ ಆರೋಪಿತನಿಗೆ ವಾರಂಟ ಜ್ಯಾರಿ ಮಾಡಲಾಯಿತು ಹಾಗೂ ಸಾಕ್ಷಿಯನ್ನು ಮುಂದಿನ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ